ಎಚ್.ಆರ್. ದೇಸಾಯಿ, ರಾಯಚೂರು

*ಎಲ್ಲಾ ದೇವತೆಗಳಿಗೂ ತಮ್ಮದೇ ವಾಹನಗಳಿವೆ. ಆದರೆ ತ್ರಿಲೋಕ ಸಂಚಾರಿ ನಾರದನಿಗೇಕೆ ಯಾವುದೇ ವಾಹನ ಇಲ್ಲ?*



ತಂಬೂರಿ ಬಾರಿಸಿಕೊಂಡು ವೆಹಿಕಲ್ ಡ್ರೈವ್ ಮಾಡಕ್ಕೆ ಆಗಲ್ಲವಲ್ಲ.

ಅಭಿಷೇಕ. ರ. ಬೊಂಗಾಳೆ. ಬೈಲಹೊಂಗಲ

*ಆಗಿನ ಯುವಕರಿಗೂ, ಈಗಿನ ಯುವಕರಿಗೂ ಏನು ವ್ಯತ್ಯಾಸ ರಾಮ್ ಸರ್?*

ಆಗಿನ ಯುವಕರು ಹುಲಿ ಹಿಡಿಯುತ್ತಿದ್ದರು, ಈಗಿನ ಯುವಕರು ಇಲಿ (ಮೌಸ್) ಹಿಡಿಯುತ್ತಾರೆ.

ಪಿ.ಜೆ. ರಾಘವೇಂದ್ರ, ಮೈಸೂರು

*ಸರ್ಕಾರದ ಕೈಯಲ್ಲಿ ಮಠವೋ, ಮಠದ ಕೈಯಲ್ಲಿ ಸರ್ಕಾರವೋ?*

ಮಠದ ಕೈಯಲ್ಲೇ. ಆದರೆ ಯಾವುದೇ ಶ್ರೀಮಠಗಳ ಕೈಯಲ್ಲಲ್ಲ. ಮ – ಮಂತ್ರಾಲೋಚನೆ, ಠ – ಠಕ್ಕುತನದ ಕೈಯಲ್ಲಿ!

ಎಸ್. ವಿಜಯಕುಮಾರಿ, ಊರಿಲ್ಲ

*ದಿಢೀರ್ ಪ್ರಖ್ಯಾತರಾಗಲು ಏನು ಮಾಡಬೇಕು?*




ಪಂಚಾಂಗ ಸುಡಿ, ಭಗವದ್ಗೀತೆ ಸುಡಿ, ಮಡಿ ಎಂದವರನ್ನು ಸುಡಿ, ಒಗ್ಗಟ್ಟು ಹೆಚ್ಚಿಸಲು ಒಂದೇ ತಟ್ಟೆಯಲ್ಲಿ ಉಣ್ಣೆ, ಎಂದೆಲ್ಲ ಹೇಳಿಕೆ ನೀಡಿ.

ಚೈತ್ರ ಕುಕ್ಕೆಮನೆ, ಬೆಂಗಳೂರು

*ಪ್ರೀತಿಯಲ್ಲಿ ಇರುವ ಸೆಳೆತ ಸ್ನೇಹದಲ್ಲಿ ಏಕೆ ಇರುವುದಿಲ್ಲ?*

ಪ್ರೀತಿಯಲ್ಲಿ ದೊರೆಯುವಷ್ಟು ಗಿಫ್ಟ್‌ಗಳು ಸ್ನೇಹದಲ್ಲಿ ದೊರೆಯುವುದಿಲ್ಲವಲ್ಲ!

ಕೆ.ಎಂ. ವೀರೇಶ್, ಕೂಡ್ಲಿಗಿ

*ನಾವು ರಣರಂಗಕ್ಕೆ ಬರುತ್ತಿದ್ದೇವೆ. ನೀವು ಅರ್ಜುನನಿಗೆ ಸಾರಥಿ ಆಗುವಿರೋ ಅಥವಾ ಬಭ್ರುವಾಹನನಿಗೆ ಸಾರಥಿ ಆಗುವಿರೋ?*

ಅರ್ಜುನನ ಸಾರಥಿ ಮತ್ತೆ ಡ್ಯೂಟಿಗೆ ಜಾಯಿನ್ ಆಗುವುದರಿಂದ ಬಭ್ರುವಾಹನನಿಗೆ ಆಗುವುದೇ ವಾಸಿ; ಜಾಬ್ ಸೆಕ್ಯುರಿಟಿ ಇರುತ್ತದೆ!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಗಣಪತಿಯ ವಾಹನವಾದ ಇಲಿಯನ್ನು ಬೆಕ್ಕು ತಿಂದುಬಿಟ್ಟರೆ ಗಣಪತಿಗೆ ಬೆಕ್ಕಿನ ಮೇಲೆ ಸಿಟ್ಟು ಬರಲ್ವಾ?*

ಇಲ್ಲ. ಲೇಟೆಸ್ಟ್ ಮಾಡಲ್ ಇಲಿ ಪಡೆಯಬಹುದು ಎಂದು ಸಂತೋಷ ಪಡುತ್ತಾನೆ.

ಎಂ. ಮಂಜುಳಾ ಸಿದ್ದರಾಜು, ಭದ್ರಾವತಿ

*ನಮಗೆ ಇನ್ನೂ ಬ್ರಿಟಿಷರಿಂದ ಸ್ವಾತಂತ್ರ್ಯ ಸಿಗದೆ ಹೋಗಿದ್ದಿದ್ದರೆ ಈಗ ಭಾರತದೇಶ ಹೇಗಿರುತ್ತಿತ್ತು?*

ಕೃಷಿ ಹೆಚ್ಚುತ್ತಿತ್ತು, ಖುಷಿ ತಗ್ಗುತ್ತಿತ್ತು.

ನಾಗಮಣಿ ಸೋಮಶೇಖರ್, ಮೈಸೂರು

*ಓಬಿರಾಯನ ಕಾಲದ್ದು ಅಂತಾರಲ್ಲ, ಆ ಓಬಿರಾಯ ಯಾರು?*

ಓನಾಮ ಬಿತ್ತಿದ ರಾಯ – ಬ್ರಹ್ಮ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ ಮಠ

*ದ್ರೌಪದಿಯ ಮನಸ್ಸಿನಲ್ಲಿ ಕರ್ಣನಿದ್ದುದು ನಿಜವಾ ಸಾರ್?*

ಅವಳು ಹೌಸ್ ವೈಫ್ ಅಲ್ಲವೇ – ಇಡೀ ಹೌಸ್‌ಗೇ ವೈಫು. ಕರ್ಣನೂ ಅದೇ ಹೌಸ್‌ನ ಅಂಗವೆಂದು ತಿಳಿದಾಗ ಹಾಗೆ ಅನಿಸಿರಬಹುದು!

ಕೆ.ಎಂ. ಲಿಂಗರಾಜು, ನಂಜನಗೂಡು

*ಕಣ್ತೆರೆಸುವುದಕ್ಕೂ, ಕಣ್ಣೊರೆಸುವುದಕ್ಕೂ ಏನು ವ್ಯತ್ಯಾಸ?*

ಕಣ್ತೆರೆಸಲು ಅರಿವು ಬೇಕು. ಕಣ್ಣೊರೆಸಲು ಅರಿವೆ ಸಾಕು.

ಸಂಪಿಗೆ ಶ್ರೀವತ್ಸ, ಬೆಂಗಳೂರು

*ಕಾಗೆ ಆಹಾರ ಸಿಕ್ಕಾಗ ಬಳಗವನ್ನು ಕರೆದು ತಿನ್ನುತ್ತದೆ. ನಾಯಿ ಬಳಗವನ್ನು ಓಡಿಸಿ ತಿನ್ನುತ್ತದೆ. ಮನುಷ್ಯ?*

ಅವಕಾಶ ಸಿಕ್ಕರೆ ಬಳಗವನ್ನೇ ಇಂಚು ಇಂಚಿಗೂ ತಿಂದುಬಿಡುತ್ತಾನೆ.

ಮಹಾವೀರ ಕಾಸರ, ಶಿವಮೊಗ್ಗ

*ಪ್ರೀತಿಯಲ್ಲಿ ಕಾಮ ಇರಲೇಬೇಕಾ?*

ಕಾಮ ಇರಲೇಬೇಕೆಂದೇನಿಲ್ಲ. ಪ್ರೀತಿಗೆ ಫುಲ್‌ಸ್ಟಾಪ್ ಇರಬಾರದು ಅಷ್ಟೆ.

## ಬಹುಮಾನಿತ ಪ್ರಶ್ನೆ

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

ಸಂಕಟ ಬಂದಾಗ ವೆಂಕಟರಮಣ ಎನ್ನುವ ಜನರು ಸುಖ ಬಂದಾಗ ಅವನನ್ನು ಮರೆತೇಬಿಡುತ್ತಾರಲ್ಲಾ.....?

ಅದೇ ನಮ್ಮ ಸತ್ಸಂಪ್ರದಾಯ! ಕೇಸ್ ಕ್ಲೋಸ್ ಆದಮೇಲೆ ಲಾಯರು ಈಸ್ ಎ ಸ್ಟ್ರೇಂಜರು!

ವಿ. ಹೇಮಂತಕುಮಾರ್, ಬೆಂಗಳೂರು

*ವೃದ್ಧ ಮಾತಾಪಿತೃಗಳನ್ನು ಜೋಡಿ ತೊಟ್ಟಿಲಿನಲ್ಲಿಟ್ಟುಕೊಂಡು ತೀರ್ಥಯಾತ್ರೆಗೆ ಹೊರಟ ಶ್ರವಣನಂತಹವರು ಈಗ ಇದ್ದಾರೆಯೆ?*

ಇಲ್ಲ ಬಿಡಿ; ಹಾಗೆ ಒಂದೇ ತೂಕ ಇದ್ದು ಬ್ಯಾಲೆನ್ಸ್ ಆಗುವಂತಹ ಮಾತಾಪಿತೃಗಳು ಈಗ ಸಿಗುತ್ತಿಲ್ಲ.

ಮೋಹನ್ ರಾಜು ಎಸ್.ಎ. ಶಿವಮೊಗ್ಗ

*ಗುಡಿ ಸೇರದ, ಮುಡಿ ಏರದ ಹೂವುಗಳ ಬದುಕು ಸಾರ್ಥಕವೇ ರಾಮ್‌ಜೀ?*

ಈಗ ಆ ವಿಧದ ಹೂಗಳದೇ ಪರ್ವಕಾಲ – ಬೊಕೆ ಆಗಿ ಎಲ್ಲೆಡೆಯೂ ಮೆರೆಮೆರೆದು ಸಾರ್ಥಕತೆ ಪಡೆಯುತ್ತವೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಗುಡುಗು, ಮಿಂಚು, ಮಳೆಗೂ, ಹೆಂಡತಿಗೂ ಸಂಬಂಧವೇನು?*




ಹೆಂಡತಿ ಈ ಮೂರರ ಸಾಕಾರ – ಒಲಿದಾಗ ಮಿಂಚು, ಮುನಿದಾಗ ಗುಡುಗು, ಸೋತಾಗ ಮಳೆ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಇಲ್ಲದ ದೇವರನ್ನು ಇದೆ ಎಂದು ಹೇಳುವುದರ ರಹಸ್ಯ?*

ತಿರುಪತಿಯ ಲಾಡು, ರಾಯರ ಮಠದ ಪಂಚಾಮೃತ, ಅಮೃತಸರದ ರುಚಿಕರ ಪ್ರಸಾದ, ಇವೆಲ್ಲವನ್ನೂ ತಪ್ಪಿಸಿಕೊಳ್ಳದಿರಲು.

ಅಭಿಷೇಕ ಅರವಿಂದ ಮಠ, ಗುಲಬರ್ಗಾ

*ಶರೀರಕ್ಕೂ, ಶಾರೀರಕ್ಕೂ ಏನು ವ್ಯತ್ಯಾಸ?*

ಶರೀರಕ್ಕೆ ಹೊರ ಸಂಚಾರ ಮುಖ್ಯ, ಶಾರೀರಕ್ಕೆ ಸ್ವರಸಂಚಾರ ಮುಖ್ಯ.

■ ರಾಮ್